**ಅಸಲು ದಾವಾ ನಂಬರ 444/2022**

**ಪಿ ಡಬ್ಲ್ಯೂಃ1**

**ದಿಃ 05.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ನಂಬರ 2 ಮತ್ತು 3 ರವರ ಪರ ವಕೀಲರಾದ ಶ್ರೀ ಎ.ಆರ್.ಎ ವಕೀಲರಿಂದ.**

ನನ್ನ ಮನೆಯವರು ಹಾಗೂ ನಾನು ದಾವಣಗೇರಿ ಮತ್ತು ಬೆಂಗಳೂರಿನಲ್ಲಿ ಏನು ವ್ಯವಹಾರ ಮಾಡಿರುತ್ತೇವೆ ಅದಕ್ಕೆ ಸಂಬಂಧಿಸಿದಂತೆ ಪ್ರತಿವಾದಿ 2 ಮತ್ತು 3 ರವರು ಹಣ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಕೊಟ್ಟಿಲ್ಲ ಎನ್ನುತ್ತಾರೆ. ಬೆಂಗಳೂರು ಹಾಗೂ ದಾವಣಗೇರಿಯಲ್ಲಿ ವ್ಯವಹಾರ ಮಾಡುವ ಸಮಯದಲ್ಲಿ ನಮ್ಮ ಬ್ಯಾಂಕ ಖಾತೆಗಳು ಇದ್ದವು ಎಂದರೆ ಸರಿ. ಆ ಸಮಯದಲ್ಲಿ ನಮ್ಮ ಬಳಿ ಸಾಕಷ್ಟು ಹಣ ಇತ್ತು ಎಂದು ತೋರಿಸಲು ಆ ಬ್ಯಾಂಕ ಖಾತೆಗಳನ್ನು ತಂದು ಹಾಜರುಪಡಿಸಲು ನಿಮಗೆ ತೊಂದರೆ ಇಲ್ಲವೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಅಕ್ಕ ಮಂಜುಳಾ ಇವರ ಪರವಾಗಿ ನೀವು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅವರ ಸಾಕ್ಷ್ಯ ನಂತರ ಮಾಡಿಸುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಅಕ್ಕ ಹಾಗೂ ನಮ್ಮ ಮನೆತನದಲ್ಲಿ ಏನೇನೂ ವ್ಯವಹಾರಗಳು ಆಗಿವೆ ಎಂಬ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲವೆಂದರೆ ಸರಿ.

ನನ್ನ ಅಕ್ಕ ಅವರ ಗಂಡನ ಮಾರುತಿ ಮೇಟಲ್ಸ ಎಂಬ ಅಂಗಡಿ ಇದ್ದು ಅದನ್ನು ಯಾವ ಕಾರಣಕ್ಕೆ ಮುಚ್ಚಲಾಯಿತು ಎಂದು ಹೇಳುತ್ತೀರಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಹಾಗೂ ನನ್ನ ಅಕ್ಕ ಮಂಜಳಾ ಬೇರೆ-ಬೇರೆ ಏರಿಯಾದಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ಮಂಜಳಾ ಇವರು ಪೂಜಾರಿ ಕುಟುಂಬಕ್ಕೆ ಹಿರಿಯ ಮಗಳು ಎಂದರೆ ಸರಿ. ಹಾಗಾಗಿ ಪೂಜಾರಿ ಮನೆತನದಲ್ಲಿ ನನ್ನ ಅಕ್ಕ ನನ್ನ ತಾಯಿಯವರ ಜೊತೆ ಹಾಗೂ ನನ್ನ ಅಣ್ಣತಮ್ಮಂದಿರ ಜೊತೆ ನನಗಿಂತ ಹೆಚ್ಚಿನ ಸಂಪರ್ಕದಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ತಾಯಿಯ ಜೊತೆ ನನ್ನ ಅಕ್ಕ ಹೆಚ್ಚಿನ ಸಂಪರ್ಕದಲ್ಲಿ ಇರುವ ಕಾರಣ ನನ್ನ ತಾಯಿ ಎಲ್ಲ ವಿಷಯಗಳನ್ನು ನನ್ನ ಅಕ್ಕಳ ಜೊತೆ

ಹಂಚಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಹಾಗೇನು ಇಲ್ಲ ಎನ್ನುತ್ತಾರೆ. ನನ್ನ ತಾಯಿ 1 ನೇ ವಾದಿ ಅಂದರೆ ನನ್ನ ಅಕ್ಕಳಿಗೆ ಮನೆತನದ ಆಗು–ಹೋಗುಗಳನ್ನು ತಿಳಿಸುತ್ತಿದ್ದರು ಎಂದರೆ ಸಾಕ್ಷಿ ಹಾಗೇನೂ ಇಲ್ಲವೆಂದು ಸಾಕ್ಷ್ಯ ನುಡಿಯುತ್ತಾರೆ. ಮಂಜುಳಾ ಇವರಿಗೆ ದಾವಾ ಆಸ್ತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸಾಕ್ಷಿ ಇದೆ, ನಮಗೂ ಇದೇ ಎನ್ನುತ್ತಾರೆ. ದಾವಾ ಹಾಕುವ ಮುನ್ನಾ ದಾವಾ ಆಸ್ತಿಗಳ ವಿವರವನ್ನು ನನ್ನ ತಾಯಿಯ ಕಡೆಯಿಂದ ಕೇಳಿ ತಿಳಿದುಕೊಂಡಿದ್ದೇವೆ ಎಂದರೆ ಸಾಕ್ಷಿ ನನ್ನ ಅಮ್ಮ ನೀವು ದಾವಾ ಹಾಕಿ ಎಂದು ಹೇಳಿದ್ದರು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನನ್ನ ತಾಯಿಯೆ ಎಲ್ಲ ವಿವರಗಳನ್ನು ಹೇಳಿದ್ದರು ಎನ್ನುತ್ತಾರೆ. ದಾವಾ ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನೀಡಲು ನಾವು ಹಾಗೂ ನನ್ನ ತಾಯಿ ಎಲ್ಲರೂ ಹೋಗಿದ್ದೇವು. ನನ್ನ ತಾಯಿಯವರು ವಕೀಲರ ಬಳಿ ಸುಮಾರು 3 ರಿಂದ 4 ಬಾರಿ ಬಂದಿರುತ್ತಾರೆ. ಏನೇನೂ ದಾಖಲೆಗಳನ್ನು ದಾವಾ ಹಾಕುವ ಬಗ್ಗೆ ನನ್ನ ತಂದೆಯವರು ಮಾಡಿ ಹೋಗಿರುತ್ತಾರೆ ಆ ಬಗ್ಗೆ ವಾದಿ ನಂಬರ 1 ನನಗೆ ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಎಲ್ಲವೂ ನನಗೆ ಗೊತ್ತಿತ್ತು ಎಂದು ನುಡಿಯುತ್ತಾರೆ. ನನ್ನ ತಂದೆಯವರು ಯಾವ ದಾಖಲೆಗಳನ್ನು ಮಾಡಿರುತ್ತಾರೆ ಎಂಬ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಮಾಹಿತಿ ಇದೆ ಎನ್ನುತ್ತಾರೆ. ನನ್ನ ತಂದೆಯವರು ಮಾಡಿಟ್ಟ ದಾಖಲೆಗಳ ಬಗ್ಗೆ ಎಂ.ಎಂ.ಮೆಹರವಾಡೆ ಇವರ ಮಗ ರಾಜು ಮೆಹರವಾಡೆ ಇವರಿಗೆ ವಿಷಯ ಗೊತ್ತಿದೆ ಎಂದರೆ ಸಾಕ್ಷಿ ನನಗೆ ಅದು ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ಮಾಡಿಟ್ಟ ದಾಖಲೆಗಳ ಬಗ್ಗೆ ಮಂಜುಳಾ ಇವರಿಗೆ ಮಾಹಿತಿ ಇದೆ ಎಂದರೆ ಸಾಕ್ಷಿ ಮಾಹಿತಿ ಇದೆ ಎನ್ನುತ್ತಾರೆ.

ದಾವಾ ಹಾಕುವ ಮುನ್ನ ಹಾಗೂ ದಾವಾ ಹಾಕಿದ ನಂತರ ನಾನು ಹಾಗೂ ನನ್ನ ಅಕ್ಕ ಮಂಜುಳಾ ನನ್ನ ತಾಯಿಯ ಜೊತೆ ಬಂದು ವಾಸಿಸುತ್ತಿದ್ದೇವೆ ಎಂದರೆ ಸಾಕ್ಷಿ ದಾವಾ ಹಾಕಿದ ನಂತರ ನನ್ನ ಅಣ್ಣಂದಿರು ಇಬ್ಬರು ಅಮ್ಮನನ್ನು ಬಿಟ್ಟು ಮನೆ ಬಿಟ್ಟು ಹೋದರು, ಆ ಕಾರಣಕ್ಕೆ ನಾವು ನಮ್ಮ ಅಮ್ಮನನ್ನು ನೋಡಿಕೊಂಡೆವು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಆ ನಂತರ ಕೇಸ ವಾಪಸ್ಸು ತೆಗೆದುಕೊಳ್ಳಿ ನಮ್ಮ ಅಮ್ಮನನ್ನು ನೋಡಿಕೊಳ್ಳುತ್ತೇವೆ ಎಂದು ಅವರು ಹೇಳಿರುತ್ತಾರೆ. ಈಗ ನನ್ನ ತಾಯಿಯವರು ಪ್ರತಿವಾದಿ 2 ಮತ್ತು 3 ರವರ ಜೊತೆ ಇದ್ದಾರೆ ಎಂದರೆ ಸರಿ. ಪ್ರತಿವಾದಿ 2 ಮತ್ತು 3 ರವರು ಕೇಸ ವಾಪಸ್ಸು ತೆಗೆದುಕೊಳ್ಳಿ ನಾವು

ಅಮ್ಮನನ್ನು ನೋಡಿಕೊಳ್ಳುತ್ತೇವೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವಿಬ್ಬರು ಪ್ರತಿವಾದಿ 2 ಮತ್ತು 3 ರವರಿಗೆ ನಾವು ನಮ್ಮ ತಾಯಿಯನ್ನು ನೋಡಿಕೊಳ್ಳುತ್ತೇವೆ ನೀವು ನೋಡಿಕೊಳ್ಳುವುದು ಬೇಡಾ ಎಂದು ಜಬರದಸ್ಥ ಮಾಡಿ ಅವರನ್ನು ಮನೆಯಿಂದ ಹೊರಗೆ ಹಾಕಿರುತ್ತೇವೆ ಎಂದರೆ ಸರಿಯಲ್ಲ, ಅವರಾಗಿಯೇ ಹೋಗಿರುತ್ತಾರೆ ಎಂದು ನುಡಿಯತ್ತಾರೆ. ನಾವಿಬ್ಬರು ಸೇರಿ ನನ್ನ ತಾಯಿಗೆ ಇದ್ದಂತಹ ಬ್ಯಾಂಕ ಖಾತೆಯನ್ನು ಮುಚ್ಚಿಸಿರುತ್ತೇವೆ ಎಂದರೆ ಸಾಕ್ಷಿ ಸದರಿ ಖಾತೆ ನನ್ನ ತಾಯಿ ಮತ್ತು ಅಣ್ಣಂದಿರ ಜಂಟಿ ಖಾತೆ ಇತ್ತು ನಾವು ಅದನ್ನು ಮುಚ್ಚಿಸಿಲ್ಲ ಎನ್ನುತ್ತಾರೆ. ಆ ಸಮಯಲ್ಲಿ ನನ್ನ ತಾಯಿಗೆ ಇದ್ದಂತಹ ಕರ್ನಾಟಕ ಬ್ಯಾಂಕ ಖಾತೆಯನ್ನು ಮುಚ್ಚಿಸಿ ಮತ್ತು ಅದರಲ್ಲಿ ಇದ್ದ ಲಾಕರನ್ನು ತೆಗೆಯಿಸಿ ಮುಚ್ಚಿಸಿ ಬೇರೆ ಬ್ಯಾಂಕನಲ್ಲಿ ಇರಿಸಿದೇವು ಎಂದರೆ, ಸಾಕ್ಷಿ ನನ್ನ ಅಮ್ಮನೇ ಸದರಿ ಖಾತೆಯನ್ನು ಬೇರೆ ಕಡೆ ಬದಲಾವಣೆ ಮಾಡಿದರು ಎನ್ನುತ್ತಾರೆ. ಸದರಿ ಖಾತೆ ಜಂಟಿ ಖಾತೆ ಇತ್ತು ಎಂದು ಹೇಳಿದ್ದು ಈ ಸಂಬಂಧ ಪ್ರತಿವಾದಿ 2 ಮತ್ತು 3 ಬ್ಯಾಂಕಿಗೆ ಕರೆದುಕೊಂಡು ಹೋಗಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಕರ್ನಾಟಕ ಬ್ಯಾಂಕನ ಸೇವಾ ಖಾತೆಯನ್ನು ನನ್ನ ತಾಯಿ ಒಬ್ಬಳೆ ಹೆಸರಿನಲ್ಲಿದ್ದು ಅದನ್ನು ಮುಚ್ಚಿಸಿ ಮಹಾರಾಷ್ಟ್ರ ಬ್ಯಾಂಕಗೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನ್ನ ತಾಯಿ ಮಾಡಿಸಿರುತ್ತಾರೆ ನಾವು ಮಾಡಿಸಿಲ್ಲ ಎನ್ನುತ್ತಾರೆ.

ನಮ್ಮಿಬ್ಬರ ಮಾತು ಕೇಳಿ ನನ್ನ ತಾಯಿ ನ್ಯಾಯಾಲಯದಲ್ಲಿ ಮೇಮೋವನ್ನು ಸಲ್ಲಿಸಿದ್ದು ಆ ಮೆಮೋದಲ್ಲಿ ನಮ್ಮ ಕೇಸಗೆ ಅವರು ಸಪೋರ್ಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಸರಿ ಅಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಅಣ್ಣನವರು ಮನೆ ಬಿಟ್ಟು ಹೋದಾಗ ನನ್ನ ತಾಯಿ ಆಸ್ತಿಯಲ್ಲಿ ಐದು ಭಾಗ ಆಗಲಿ ಎಂದು ಮತ್ತು ನೀವು ನನ್ನ ಮಕ್ಕಳು ಎಂದು ಹೇಳಿ ಮೆಮೋ ಹಾಕಿದರು ಎಂದು ನುಡಿಯುತ್ತಾರೆ. ದಿಃ02-09-2023 ರಂದು ನಮ್ಮ ತಾಯಿಯವರು ಸಲ್ಲಿಸಿರುವ ಮೆಮೋ ಇದೇನಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿಗೆ ದಿಃ09-01-2023 ರಂದು ನನ್ನ ತಾಯಿಯವರು ಸಲ್ಲಿಸಿರುವ ಮೆಮೋ ಎಂದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಮೆಮೋ ಯಾವ ವಕೀಲರ ಕಡೆ

ಹೋಗಿ ನಿಮ್ಮ ತಾಯಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ನಮ್ಮ ವಕೀಲರ ಕಡೆ ಎನ್ನುತ್ತಾರೆ.

ದಿಃ02-09-2023 ರ ಮತ್ತು ದಿಃ09-01-2023 ರ ಎರಡು ಮೆಮೋಗಳನ್ನು ಸಾಕ್ಷಿ ನೋಡಿ ಗುರ್ತಿಸಿದ್ದರಿಂದ ನಿಶಾನೆ ಡಿ 1 ಮತ್ತು ನಿಶಾನೆ ಡಿ 2 ಎಂದು ಗುರ್ತಿಸಲಾಯಿತು. ದಿಃ02-09-2023 ರ ಮೆಮೋವನ್ನು ನನ್ನ ತಾಯಿಯವರು ನಮ್ಮ ವಕೀಲರನ್ನು ರಿಜೆಕ್ಟ್ ಮಾಡಿ ಬೇರೆ ವಕೀಲರ ಕಡೆಯಿಂದ ಹಾಕಿಸಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ 2 ಮತ್ತು 3 ನೇ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದುಡಲಾಯಿತು)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ